ಪಾದಶ್ಟು 20 ಸಾವಿರ ರೂಪಾಯಿಗಳ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅದನ್ನು ಉಪಯೋಗಿಸಿಕೊಂಡು ಸಾಧ್ಯವಾದಷ್ಟು ಗಾಡಿ ಹೋಗುವುದಕ್ಕೆ ಅನುಕೂಲವಾಗುವ ಹಾಗೆ ಮಾಡಿಕೊಡಬೇಕು ಎಂದು ನಾನು ತಿಳಿಸಿದ್ದೇನೆ.

ಶ್ರೀ ಸಿ. ಬೈರೇಗೌಡ - ಈಗ 17(0 ರೂಪಾಯಿಗಳನ್ನೇನೋ ಈ ರಸ್ತೆಗೆ ಈಗಾಗಲೇ ಖರ್ಚು ಮಾಡಿದ್ದೇವೆ ಎಂದು ಹೇಳಿದ್ದೀರಿ ಈ ಹಣ ಆ ರಸ್ತೆಗೆ ಸುಣ್ಣ ಬಣ್ಣ ಬಳಿಯುವುದಕ್ಕೆ ಖರ್ಚಾಗಿದೆ. ಅದರೆ ಮಣ್ಣು ಮತ್ತು ಜೆಲ್ಲಿಯನ್ನು ಹಾಕುವುದಕ್ಕೆ ಖರ್ಚಾಗಿಲ್ಲ ಅಲ್ಲವೇ ?

ಶ್ರೀ ಸಿ. ಬೈರೇಗೌಡ.—ಅದು ಸರಿಯಲ್ಲ.

Benefit from Avenue trees

615. SRI P. MUNIYAPPA (Mulbagal).—Will the Minister for Public Works be pleased to state :—

(*a*) whether Government has taken steps to see that the ryots should get benefit from the psoduce of the avenue trees planted on either side of the road maintained by them ;

(*b*) if not, whether the Government will consider this matter and take suitable steps ?

SRI M. MALLIKARJUNASWAMY (Minister for Public Works).—

(*a*) Yes.

(*b*) This Question does not arise in view of the above reply.

ಶ್ರೀ ಪಿ. ಮುನಿಯಪ್ಪ.—ಸ್ವಾಮಿ ರಸ್ತೆಗಳ ಪಕ್ಕದಲ್ಲಿ ಸಾಲುಮರಗಳನ್ನು ನೆಟ್ಟಿರುವುದನ್ನು ಮೊದಲು ಆಯಾಯ ಪಕ್ಕದ ಜಮೀನಿನ ರೈತರೇ ನೂರಾರು ವರ್ಷಗಳಿಂದ ಆ ಮರಗಳನ್ನು ನೋಡಿಕೊಂಡು ಅವುಗಳ ಪೋಷಣೆಯನ್ನು ಮಾಡಿಕೊಂಡು ಬಂದಿರುತಕ್ಕ ಮರಗಳನ್ನು ಆಯಾಯ ರೈತರಿಗೇ ಕೊಡಬೇಕೆಂದು ಮೊದಲು ಸರ್ಕಾರ ಒಂದು ಹುಕುಂ ಹೊರಡಿಸಿದ್ದರು. ಆದರೆ ಈಗ ಡಿಪಾರ್ಟ್‌ಮೆಂಟಿನವರೇ ಆ ಮರಗಳನ್ನು ಆಕ್ಷನ್ ಮುಖಾಂತರ ಬೇರೆಯವರಿಗೆ ಕೊಡುತ್ತಾ ಇರುವುದರಿಂದ ಮರಗಳನ್ನು ಪೋಷಣೆ ಮಾಡಿಕೊಂಡು ಬಂದಿರತಕ್ಕ ರೈತರಿಗೆ ಅನ್ಯಾಯವಾಗುತ್ತಿದೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದೀರಿ ?

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—1976ನೇ ಇಸವಿಯಲ್ಲಿ ಸರ್ಕಾರ ಒಂದು ಹುಕುಂ ಅನ್ನು ಜಾರಿಗೆ ತಂದು ಅದರ ಪ್ರಕಾರ ಅವರಿಗೆ ಸನ್ನದುಗಳನ್ನು ಕೊಡಬೇಕು ಎಂದು ಇದೆ. ಅದರ ಜೊತೆಗೆ ಆ ಮರಗಳಿಂದ ಬರತಕ್ಕ ಉತ್ಪನ್ನವನ್ನು ಅವರೇ ಅನುಭವಿಸುವುದಕ್ಕೆ ಈಗಾಗಲೇ ಆಜ್ಞೆಯನ್ನು ಮಾಡಿದೆ. ಅದು ಜಾರಿಯಲ್ಲಿದೆ. ಅದನ್ನು ಕೈಬಿಟ್ಟಿಲ್ಲ. ಎಗ್ಸಿಕ್ಯುಟೀವ್ ಇಂಜಿನಿಯರಿಗೆ ಅರ್ಜಿಯನ್ನು ಹಾಕಿದರೆ ಅವರು ಶಿಫಾರಸ್ಸು ಮಾಡಿ ಡೆಪ್ಯುಟಿ ಕಮೀಷನರಿಗೆ ಕಳಿಸುತ್ತಾರೆ. ಅವರು ಹಕ್ಕುದಾರರಿಗೆ ಪತ್ರವನ್ನು ಮತ್ತು ಸನ್ನದನ್ನೂ ಕೊಡುತ್ತಾರೆ. ಇದು ಸರ್ಕಾರದ ಆಜ್ಞೆಯಲ್ಲಿದೆ.